# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

**ಬೈರಸಂದ್ರ , ವಾರ್ಡ ಸಂಖ್ಯೆ: 169**

**ದಿನಾಂಕ:28.02.2022 ರಂದು ವಾರ್ಡ ಸಂಖ್ಯೆ 169 ಬೈರಸಂದ್ರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

**–: ಸಮಿತಿ ಸಭೆಯ ನಡವಳಿಗಳು :–**

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ ಸಮಿತಿ ಸದಸ್ಯರು:–

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲೂ ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯಾದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ನರೇಂದ್ರ ಬಾಬು | ಅರಣ್ಯ ಇಲಾಖೆ (ದಕ್ಷಿಣ) , ಬಿ.ಬಿ.ಎಂ.ಪಿ |
| 04 | ಶ್ರೀ ಸುನೀಲ್ ಕುಮಾರ್ ವಿ | ಸಹಾಯಕ ಅಭಿಯಂತರರು, BWSSB |
| 05 | ಕುಮಾರಿ ಪೂನಂ | ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 06 | ಶ್ರೀ ರಮೇಶ್ ವಿ ಬಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 07 | ಶ್ರೀ ಶ್ರೀನಿವಾಸನ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 08 | ಶ್ರೀ ಮಂಜುನಾಥ್ ಜಿ ಎನ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 09 | ಶ್ರೀ ಪರಮೇಶ್ವರನ್ ಟಿ ಕೆ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘದ ಕಾರ್ಯಾದರ್ಶಿ |
| 10 | ಶ್ರೀ ಬಾಬು ರಾವ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘದ ಅಧ್ಯಕ್ಷರು |

ವಾರ್ಡ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ 14.02.2022 ರಂದು ತಿಳಿಸಿದ ಸಾರ್ವಜನಿಕರು ಮತ್ತು ನೌಕರರು ತಿಳಿಸಿದ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.
2. ವಾರ್ಡ ಸಂಖ್ಯೆ 169 ರಲ್ಲಿರುವ ಬೈರಸಂದ್ರ ಮುಖ್ಯರಸ್ತೆಯ ಅನೇಕ ಕಡೆ ವಿದ್ಯುತ್ ಕಡಿತಕೊಳ್ಳುತ್ತಿದು, ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, BESCOM, ಜಯನಗರ)**
3. ವಾರ್ಡ ಸಂಖ್ಯೆ 169 ರಲ್ಲಿರುವ 18ನೇ, 19ನೇ, 20ನೇ ಮತ್ತು 21ನೇ ಅಡ್ಡರಸ್ತೆ ಯಲ್ಲಿ BWSSB ಇಲಾಖೆ ವತಿಯಿಂದ ಒಳಚರಂಡಿ ಮಾರ್ಗಕ್ಕಾಗಿ ಕೂಳವೆಗಳನ್ನು ಅಳವಡಿಸಲು ರಸ್ತೆಯನ್ನು ಅಗೆದಿದ್ದು ರಸ್ತೆ ಕತ್ತರಿಸಿದ ಭಾಗಕ್ಕೆ ಡಾಂಬರೀಕರಣ ಮಾಡಲು ಸಭೆಯಲ್ಲಿ ಕೋರಿದರು. **(ಕ್ರಮ: ಕಿ.ಅ, ವಾರ್ಡ 169 ಬೈರಸಂದ್ರ , BBMP)**
4. ತಿಲಕ್‌ನಗರದಲ್ಲಿನ ಅನೇಕ ಮ್ಯಾನ್‌ಹೋಲ್ (Manhole) ಗಳಲ್ಲಿ ಹೊಳು ತುಂಬಿಕೊಂಡಿದ್ದು, ಮ್ಯಾನ್‌ಹೋಲ್‌ಗಳಲ್ಲಿರುವ ಹೂಳುನ್ನು ತೆಗೆಯಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, BWSSB, ಜಯನಗರ)**

Scanned with CamScanner

5. ಬೈರಸಂದ್ರ ಬಸ್ ನಿಲ್ದಾಣ ಮುಂಭಾಗದ ಮಾಲೀಕರಿಲ್ಲದ ವಾಹನಗಳು ನಿಲ್ಲಿಸಿದ್ದು , ಮಾಲೀಕರಿಲ್ಲದ ವಾಹನಗಳನ್ನು Towing ಮುಖಾಂತರ ತೆರವುಗೊಳಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸಂಚಾರ ಪೋಲಿಸ್ ಜಯನಗರ)**
6. ಬೈರಸಂದ್ರ ಬಸ್ ನಿಲ್ದಾಣ ಮುಂಭಾಗದ ಮರಗಳ ಕೊಂಬೆಗಳು ಬೀಳುವ ಹಂತದಲ್ಲಿರುತ್ತದೆ. ಕೊಂಬೆಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

7. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ 12ನೇ ಮುಖ್ಯರಸ್ತೆಯಲ್ಲಿರುವ ಮರಗಳ ರೆಂಬೆಗಳು ಬಾಗಿದ್ದು ಬೀಳುವ ಹಂತದಲ್ಲಿರುತ್ತದೆ. ಆದ್ದರಿಂದ ಮರದ ಕೊಂಬೆಗಳನ್ನು ತೆರವುಗೊಳಿಸಲು ತಿಳಿಸಿರುತ್ತಾರೆ. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

**ನಿರ್ಣಯ:** ಈ ವಿಷಯಕ್ಕೆ ಸಮಿತಿಯು ಒಪ್ಪಿಗೆ ತಿಳಿಸಿರುತ್ತಾರೆ. ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್. ವಿ)
ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ಸಮಿತಿ ಸಭೆ
ವಾರ್ಡ್–169, ಬೈರಸಂದ್ರ

Scanned with CamScanner